# ಮಂಡ್ಯ ಜಿಲ್ಲೆಯ ಸಂಕ್ಷಿಪ್ತ ಪಕ್ಷಿನೋಟ

# ಮಂಡ್ಯ ಜಿಲ್ಲೆಯ ಕಿರು ಪರಿಚಯ

ಹಿಂದೆ ದ್ವಾಪರಯುಗದಲ್ಲಿ ಇಂದ್ರವರ್ಮನೆಂಬ ರಾಜನು ಪುತ್ರಾಪೇಕ್ಷೆಯಿಂದ ಬಂದು ಪುತ್ರ ಸಂತಾನವಾದ ಮೇಲೆ, ಕೋಟೆ ಮತ್ತು ಅಗ್ರಹಾರಗಳನ್ನು ಕಟ್ಟಿ ಈ ಪ್ರದೇಶದಲ್ಲಿ ಮುಂಡವೇಮು ಎಂದು ಕರೆದನೆಂದು. ಅದು ಕಾಲಕ್ರಮೇಣ ಮಂಡ್ಯವಾಗಿ ಪರಿವರ್ತಿತವಾಯಿತು ಎಂಬ ಪ್ರತೀತಿ ಇದೆ. ಹಾಗೂ ಈ ಕ್ಷೇತ್ರದಲ್ಲಿ ಮಾಂಡವ್ಯ ಋಷಿಯು ತಪಸಿದ್ಧಿ ಪಡೆದಿದ್ದರಿಂದ ಈ ಪ್ರದೇಶಕ್ಕೆ ಮಂಡ್ಯ ಎಂದು ಹೆಸರು ಬಂದಿದೆ. ಸಕ್ಕರೆ ನಾಡು, ಸಕ್ಕರೆ ಜಿಲ್ಲೆ ಎಂದು ಪ್ರಖ್ಯಾತವಾದ ಮಂಡ್ಯ ಜಿಲ್ಲೆಯು 7 ಕಂದಾಯ ತಾಲ್ಲೂಕಿನಲ್ಲಿ 8 ಶೈಕ್ಷಣಿಕ ವಲಯಗಳು, 7 ವಿಧಾನಸಭಾ ಕ್ಷೇತ್ರ, 5 ವಿಧಾನ ಪರಿಷತ್ ಕ್ಷೇತ್ರ, 1 ಸಂಸದರ ಹಾಗೂ 41 ಜಿಲ್ಲಾ ಪಂಚಾಯತ್ ಸದಸ್ಯರನ್ನು ಹೊಂದಿರುತ್ತದೆ.

ಮಂಡ್ಯದ ಅಕ್ಷಾಂಶ – 12.527, ರೇಖಾಂಶ – 76.900

ಕರ್ನಾಟಕದ ದಕ್ಷಿಣ ಭಾಗದ ಒಂದು ಚೊಕ್ಕವಾದ ಚಿಕ್ಕ ಜಿಲ್ಲೆಯಾಗಿದ್ದು, ಇಲ್ಲಿನ ಶಿವನ ಸಮುದ್ರದ (ಬ್ಲಫ್) ವಿದ್ಯುತ್ ಉತ್ಪಾದನಾ ಕೇಂದ್ರವು ಏಷ್ಯಾ ಖಂಡದ ಮೊದಲ ಜಲ ವಿದ್ಯುತ್ ಉತ್ಪಾದನಾ ಕೇಂದ್ರವೆಂಬ ಹೆಗ್ಗಳಿಕೆ ಹೊಂದಿದೆ. ಜಿಲ್ಲೆಯ ಉತ್ತರಕ್ಕೆ ತುಮಕೂರು, ದಕ್ಷಿಣ ಮತ್ತು ನೈರುತ್ಯಕ್ಕೆ ಮೈಸೂರು, ಪೂರ್ವಕ್ಕೆ ಬೆಂಗಳೂರು ಹಾಗೂ ವಾಯುವ್ಯಕ್ಕೆ ಹಾಸನ ಜಿಲ್ಲೆಗಳಿಂದ ಸುತ್ತುವರಿದಿದೆ. ಜಿಲ್ಲೆಯಲ್ಲಿ ಮುಖ್ಯ ಕಸುಬು ಬೇಸಾಯ ಮತ್ತು ಪಶು ಪಾಲನೆಯಾಗಿದ್ದು, ಮುಖ್ಯ ಬೆಳೆಗಳು ಕಬ್ಬು, ಭತ್ತ, ರಾಗಿ, ಮೆಕ್ಕೆಜೋಳ, ರೇಷ್ಮೆ ಹಾಗೂ ತೆಂಗು ಆಗಿರುತ್ತದೆ. ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ, ಲೋಕಪಾವನಿ ಹಾಗೂ ಶಿಂಷಾ ನದಿಗಳು ಹರಿಯುತ್ತಿದ್ದು, ಕಾವೇರಿ ನದಿಯು ಈ ಜಿಲ್ಲೆಯ ಜೀವನದಿಯಾಗಿದೆ. 5 ಸಕ್ಕರೆ ಕಾರ್ಖಾನೆಗಳಿದ್ದು ಹಲವು ಬೆಲ್ಲ ಸಂಸ್ಕರಣ ಘಟಕಗಳು ಕಾರ್ಯ ನಿರ್ವಹಿಸುತ್ತಿರುತ್ತವೆ, ಅದಕ್ಕಾಗಿ ಸಕ್ಕರೆ ನಾಡು ಎಂದು ಪ್ರತೀತಿ ಹೊಂದಿದೆ. ಜಿಲ್ಲೆಯು ಹಾಲು ಉತ್ಪಾದನೆಯಲ್ಲಿ ರಾಜ್ಯದಲ್ಲಿ 2ನೇ ಸ್ಥಾನ ಹೊಂದಿದೆ. ಪ್ರೇಕ್ಷಣೀಯ ಸ್ಥಳಗಳಾದ ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್.ಎಸ್ ಅಣೆಕಟ್ಟು, ಶ್ರೀರಂಗನಾಥ ದೇವಾಲಯ, ನಿಮಿಷಾಂಬ ದೇವಾಲಯ, ದರಿಯಾದೌಲತ್, ಸಂಗಮ, ಗುಂಬಜ್, ರಂಗನತಿಟ್ಟು, ಮದ್ದೂರು ತಾಲ್ಲೂಕಿನ ಕೊಕ್ಕರೆ ಬೆಳ್ಳೂರು, ಮಳವಳ್ಳಿ ತಾಲ್ಲೂಕಿನ ಗಗನ ಚುಕ್ಕಿ ಹಾಗೂ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ದೇವಸ್ಥಾನಗಳು ಇಲ್ಲಿನ ಪ್ರಮುಖ ಆರ್ಕಷಣೆಯಾಗಿದೆ. 2011ರ ಜನಗಣತಿ ಪ್ರಕಾರ ಜಿಲ್ಲೆಯ ಸಾಕ್ಷರತೆ ಶೇಕಡ 70.40 ಇದ್ದು, ಪುರುಷ ಸಾಕ್ಷರರು ಶೇಕಡ 78.27, ಮಹಿಳಾ ಸಾಕ್ಷರರು ಶೇಕಡ 62.54 ರಷ್ಟು ಇರುತ್ತದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮಂಡ್ಯ.
**ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ.**
ಕಛೇರಿ ದೂರವಾಣಿ : 08232-224085 ಇ-ಮೇಲ್ – ddpi.edu.karmdy@gmail.com

## ಮಂಡ್ಯ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷಿಪ್ತ ವಿವರ

1) ಉಪನಿರ್ದೇಶಕರ ಕಛೇರಿಯ ಸಿಬ್ಬಂದಿ ವಿವರ.

| ಕ್ರ. ಸಂ. | ಹುದ್ದೆಯ ವಿವರ | ಮಂಜೂರಾದ ಹುದ್ದೆ | ಕರ್ತವ್ಯ ನಿರ್ವಹಿಸುತ್ತಿರುವವರು | ಖಾಲಿ ಹುದ್ದೆ |
|---|---|---|---|---|
| 1 | ಉಪನಿರ್ದೇಶಕರು (ಆಡಳಿತ) | 1 | 1 | 0 |
| 2 | ಶಿಕ್ಷಣಾಧಿಕಾರಿಗಳು | 2 | 2 | 0 |
| 3 | ಡಿವೈಪಿಸಿ ಎಸ್‌ಎಸ್‌ಎ | 1 | 1 | 0 |
| 4 | ಡಿವೈಪಿಸಿ ಆರ್‌ಎಂಎಸ್‌ಎ | 1 | 1 | 0 |
| 5 | ಶಿಕ್ಷಣಾಧಿಕಾರಿಗಳು (ಮ.ಊ.ಯೋ) | 1 | 1 | 0 |
| 6 | ವಿಷಯ ಪರಿವೀಕ್ಷಕರು | 5 | 4 | 1 |
| 7 | ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು | 1 | 0 | 1 |
| 8 | ಎ.ಪಿ.ಸಿ. | 2 | 2 | 0 |
| 9 | ವೃತ್ತಿ ವಿಷಯ ಪರಿವೀಕ್ಷಕರು | 1 | 1 | 0 |
| 10 | ಪತ್ರಾಂಕಿತ ಸಹಾಯಕರು | 1 | 1 | 0 |
| 11 | ಅಧೀಕ್ಷಕರು | 4 | 4 | 0 |
| 12 | ಸಾಂಖ್ಯಿಕ ಅಧಿಕಾರಿಗಳು | 1 | 1 | 0 |
| 13 | ಉರ್ದು ಶಿಕ್ಷಣ ಸಂಯೋಜಕರು | 1 | 0 | 1 |
| 14 | ಪ್ರ.ದ.ಸ. | 10 | 10 | 0 |
| 15 | ಶೀಘ್ರಲಿಪಿಗಾರರು | 1 | 1 | 0 |
| 16 | ದ್ವಿ.ದ.ಸ. | 5 | 5 | 0 |
| 17 | ಸಿ.ಸಿ.ಟಿ. | 1 | 1 | 0 |
| 18 | ಬೆರಳಚ್ಚುಗಾರರು | 3 | 1 | 2 |
| 19 | ವಾಹನಚಾಲಕರು | 1 | 1 | 0 |
| 20 | ಡಿ ದರ್ಜೆ | 9 | 8 | 1 |
| **ಒಟ್ಟು** | | **52** | **46** | **6** |

2) **ಶಾಲೆಗಳ ವಿವರ :**

| ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|
| ಸರ್ಕಾರಿ | 1690 | 215 | 1905 |
| ಸಮಾಜ ಕಲ್ಯಾಣ ಇಲಾಖೆ | 26 | 24 | 50 |
| ಸ್ಥಳೀಯ ಸಂಸ್ಥೆ | 0 | 0 | 0 |
| ಅನುದಾನಿತ | 61 | 100 | 161 |
| ಅನುದಾನ ರಹಿತ | 295 | 122 | 417 |
| ಸೆಂಟ್ರಲ್ | 2 | 1 | 3 |
| ಒಟ್ಟು | 2074 | 462 | 2536 |

3) **ಮಕ್ಕಳ ವಿವರ (ಕೆ.ಡಿ.ಪಿ.) ಜನವರಿ 2018:**

| ತರಗತಿ | ಮಕ್ಕಳ ದಾಖಲಾತಿ | ಹಾಜರಾತಿ | ಶೇಕಡ ಹಾಜರಾತಿ |
|---|---|---|---|
| 1 ರಿಂದ 5 | 108048 | 107650 | 99.63 |
| 6 ರಿಂದ 8 | 65419 | 64920 | 99.23 |
| 9 ರಿಂದ 10 | 45070 | 44910 | 99.64 |
| 1 ರಿಂದ 10 | 218537 | 217480 | 99.51 |

4) **ಶಿಕ್ಷಕರ ಹುದ್ದೆಗಳು ಮಂಜೂರು, ಕರ್ತವ್ಯ ಮತ್ತು ಖಾಲಿ ಹುದ್ದೆಗಳ ವಿವರ :**

| ವಿವರ | ಮಂಜೂರು | ಕರ್ತವ್ಯ ನಿರ್ವಹಿಸುತ್ತಿರುವವರು | ಖಾಲಿ |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 5981 | 4731 | 1250 |
| ಸರ್ಕಾರಿ ಪ್ರೌಢಶಾಲಾ ಶಿಕ್ಷಕರು | 1848 | 1654 | 194 |
| ಒಟ್ಟು | 7829 | 6385 | 1444 |

5) **2017–18ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ :–**

ಖಾಲಿ ಇರುವ ಹುದ್ದೆಗಳನ್ನು ಅಗತ್ಯವಿರುವೆಡೆ ಅತಿಥಿ ಶಿಕ್ಷಕರ ನೇಮಕ ಮಾಡಲಾಗಿದೆ.

6) **2017–18ನೇ ಸಾಲಿಗೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ 327 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.**

7) **2017–18ನೇ ಸಾಲಿಗೆ ಸರ್ಕಾರಿ ಪ್ರೌಢಶಾಲೆಗಳಿಗೆ ವಿವಿಧ ವಿಷಯಗಳ 40 ಬೋಧಕ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ.**

8) **ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫಲಿತಾಂಶ ವಿವರ:**

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಪ್ರತಿ ಶತ ಸಾಧನೆ | ರಾಜ್ಯಮಟ್ಟದ ರ್‍ಯಾಂಕ್ |
|---|---|---|---|---|
| 2015–16 | 21889 | 17068 | 77.98 | 21 |
| 2016–17 | 21568 | 15471 | 71.73 | 23 |

ಸಹಿ/–
ಉಪನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ.